# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 385<br>(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ವರ್ಗಾವಣೆಗೊಂಡಿರುವುದು) |
| 2 | ಸದಸ್ಯರ ಹೆಸರು | ಶ್ರೀ ವೈ.ಎಂ.ಸತೀಶ್<br>(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ಉತ್ತರಿಸಬೇಕಾದ ದಿನಾಂಕ | 16.02.2023 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಗ್ರಾಮ ಪಂಚಾಯತಿಗಳ ಗ್ರಾಮ ಠಾಣ ಪ್ರದೇಶ ಎಂದು ಘೋಷಿಸಲು ಇರಬೇಕಾದ ಅರ್ಹತೆಗಳೇನು; ಯಾವಾಗ ಆ ಪ್ರದೇಶವನ್ನು ಗ್ರಾಮಠಾಣ ವ್ಯಾಪ್ತಿ ಎಂದು ಅಧಿಕೃತವಾಗಿ ಘೋಷಿಸ ಲಾಗುವುದು; | ರಾಜ್ಯದಲ್ಲಿ ಮೂಲ ಸರ್ವೆ ಮತ್ತು ರೀಸರ್ವೆ ಕಾಲಕ್ಕೆ ಎಲ್ಲಾ ಗ್ರಾಮಗಳ ಕೃಷಿ ಜಮೀನುಗಳಲ್ಲಿ ಅಳತೆ ಮಾಡಿ ಗಡಿ ಗುರ್ತಿಸಿ ನಂತರ ಉಳಿದ ಜನವಸತಿ ಪ್ರದೇಶಗಳನ್ನು (ಗ್ರಾಮ ಠಾಣಾವನ್ನು) ಜಮೀನು ಸ್ಥಿತಿಯಂತೆ ಗುರ್ತಿಸಿ ದಾಖಲೆಗಳನ್ನು ತಯಾರಿಸಲಾಗಿದ್ದು, ಅದರಂತೆ, ಗ್ರಾಮ ನಕಾಶೆಯಲ್ಲಿ ಸಹಾ ದಾಖಲಿಸಲಾಗಿದೆ. |
| ಆ) | ರಾಜ್ಯದ ಗ್ರಾಮ ಪಂಚಾಯತಿಗಳ ಗ್ರಾಮಠಾಣ ಪ್ರದೇಶದ ವ್ಯಾಪ್ತಿ ಯನ್ನು ಹೆಚ್ಚಿಸುವ ಬಗ್ಗೆ ಸರ್ಕಾರದ ಮುಂದೆ ಪ್ರಸ್ತಾವನೆ ಗಳು ಇವೆಯೇ? ಇದ್ದಲ್ಲಿ, ಅದರ ವಿವರಗಳೊಂದಿಗೆ ಮಾಹಿತಿ ನೀಡುವುದು: | **ರಾಜ್ಯದ ವಿವಿಧ ಪ್ರಾಂತ್ಯಗಳಲ್ಲಿ ಕೆಳಕಂಡ ವರ್ಷಗಳಲ್ಲಿ ದಾಖಲೆ ತಯಾರಿಕೆ ಕಾರ್ಯ ಪೂರ್ಣವಾಗಿರುತ್ತದೆ**<br>ಪ್ರಾಂತ್ಯ / ಮೂಲ ಸರ್ವೇ / ರಿ-ಸರ್ವೇ:<br>ಹಳೇ ಮೈಸೂರು ಪ್ರಾಂತ್ಯ / 1863-1899 / 1900-1917<br>ಮುಂಬೈ ಪ್ರಾಂತ್ಯ / 1840-1863 / 1906-1921<br>ಮದರಾಸು ಪ್ರಾಂತ್ಯ / 1863-1904 / 1923-1935<br>ಹೈದರಾಬಾದ್ ಪ್ರಾಂತ್ಯ / 1875-1888 / 1906-1916<br>ಕೊಡಗು ಪ್ರಾಂತ್ಯ / 1806-1816 / 1906-1912 |
| ಇ) | ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಈ ರೀತಿ ಯಾವುದಾದರೂ ಗ್ರಾಮ ಪ್ರದೇಶಗಳ ಬಗ್ಗೆ ಪ್ರಸ್ತಾವನೆಗಳು ಬಂದಿವೆಯೇ ಅಥವಾ ವಿಸ್ತರಿಸ ಲಾಗಿದೆಯೇ; (ಪೂರ್ಣ ಮಾಹಿತಿ ನೀಡುವುದು) | ಬಳ್ಳಾರಿ ಹಾಗೂ ವಿಜಯನಗರ ಜಿಲ್ಲೆಗಳಿಗೆ ಸಂಬಂಧಿಸಿದಂತೆ ಕಳೆದ ಮೂರು ವರ್ಷಗಳಲ್ಲಿ ಗ್ರಾಮಠಾಣ ಪ್ರದೇಶದ ವ್ಯಾಪ್ತಿಯನ್ನು ವಿಸ್ತರಿಸುವ ಕುರಿತು ಯಾವುದೇ ಪ್ರಸ್ತಾವನೆಗಳು ಸ್ವೀಕೃತವಾಗಿರುವುದಿಲ್ಲ. |
| ಈ) | ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಗ್ರಾಮಗಳ ಗ್ರಾಮಠಾಣ ಪ್ರದೇಶದ ವ್ಯಾಪ್ತಿಯನ್ನು ವಿಸ್ತರಿಸಲು ಇರುವ ಕಾನೂನು/ ಮಾನದಂಡಗಳೇನು; (ವಿವರ ನೀಡುವುದು) | ಹಾಲಿ ಗ್ರಾಮಠಾಣಾದ ಹೊರಗಿನ ಕೃಷಿ ಜಮೀನಿನಲ್ಲಿ ನಿಯಮಾನುಸಾರ ಭೂಪರಿವರ್ತನೆ ಆದೇಶ ಮತ್ತು ಸಂಬಂಧಿಸಿದ ಯೋಜನಾ ಪ್ರಾಧಿಕಾರದ ಅನುಮೋದನೆ ಪಡೆದು ಬಡಾವಣೆ/ ಜನವಸತಿ ಪ್ರದೇಶ ನಿರ್ಮಾಣವಾಗಿದ್ದಲ್ಲಿ ಅಂತಹ ಪ್ರದೇಶವನ್ನು ಗ್ರಾಮಠಾಣಾಗೆ ಸೇರ್ಪಡೆ ಮಾಡಿ ಘೋಷಿಸಬಹುದಾಗಿದೆ. |

| | | |
|---|---|---|
| ಉ) | ಗ್ರಾಮಗಳ ಜನಸಂಖ್ಯೆ ಮತ್ತು ಅಲ್ಲಿರುವ ಮನೆಗಳ ಆಧಾರದ ಮೇಲೆ ಗ್ರಾಮಠಾಣ ಪ್ರದೇಶವನ್ನು ವಿಸ್ತರಿಸುವ ಬಗ್ಗೆ ಸರ್ಕಾರದ ತೀರ್ಮಾನಗಳೇನು? (ವಿವರ ನೀಡುವುದು) | ಕಂದಾಯ ಇಲಾಖೆ ಹಾಗೂ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆ ಜಂಟಿ ಸುತ್ತೋಲೆ ದಿನಾಂಕ: 28.10.2016 ರಂದು ಗ್ರಾಮಠಾಣಾ ಪುನರ್ ನಿಗದಿಪಡಿಸುವ ಕುರಿತಂತೆ ಕೈಗೊಳ್ಳಬಹುದಾದ ಕ್ರಮಗಳ ಕುರಿತು ಮಾರ್ಗಸೂಚಿಯನ್ನು ನೀಡಲಾಗಿದೆ. ಅಲ್ಲದೆ ಕೇಂದ್ರ ಸರ್ಕಾರವು ರಾಜ್ಯದ ಗ್ರಾಮಗಳ ಜನವಸತಿ ಪ್ರದೇಶಗಳ ಆಸ್ತಿಗಳನ್ನು ಅಳತೆ ಮಾಡಿ, ಹಕ್ಕು ದಾಖಲೆ ವಿತರಿಸುವ ಉದ್ದೇಶದಿಂದ **"ಸ್ವಾಮಿತ್ವ"** ಯೋಜನೆಯನ್ನು ಜಾರಿಗೊಳಿಸಿರುತ್ತದೆ. ಈ ಯೋಜನೆಯಡಿಯಲ್ಲಿ ಗ್ರಾಮೀಣ ಪ್ರದೇಶದ ಜಮೀನು ಸ್ಥಿತಿಯಂತೆ ಗ್ರಾಮಠಾಣಾ/ವಿಸ್ತೃತ ಗ್ರಾಮಠಾಣಾ ಅಥವಾ 10 ಕ್ಕಿಂತ ಹೆಚ್ಚಿನ ಮನೆಗಳಿರುವ ಇರುವ ಜನವಸತಿ ಪ್ರದೇಶಗಳ ಅಳತೆ ಮಾಡಿ, ಆಸ್ತಿಗಳಿಗೆ ಹಕ್ಕುದಾಖಲೆ ವಿತರಿಸಲಾಗುತ್ತಿದೆ. ಈಗಾಗಲೇ ಸ್ವಾಮಿತ್ವ ಯೋಜನೆಯಡಿ ಸುಮಾರು 3191 ಗ್ರಾಮಗಳಲ್ಲಿ Drone/Arial ಸರ್ವೆ ಕಾರ್ಯ ಪೂರ್ಣಗೊಂಡಿದ್ದು, ಈ ಪೈಕಿ 2467 ಗ್ರಾಮಗಳಲ್ಲಿ ಸುಮಾರು 8.02 ಲಕ್ಷ ಕರಡು ಪಿ.ಆರ್. ಕಾರ್ಡ (ಹಕ್ಕು ದಾಖಲೆ)ಗಳನ್ನು ಸೃಜಿಸಿ ವಿತರಿಸಲಾಗಿರುತ್ತದೆ. |

**ಸಂಖ್ಯೆ: ಕಂಇ 42 ಎಸ್‌ಎಸ್‌ಸಿ 2023**

**(ಆರ್.ಅಶೋಕ)**
ಕಂದಾಯ ಸಚಿವರು